# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ಇವರು** "ಕಲ್ಯಾಣ ಕರ್ನಾಟಕದಲ್ಲಿ 6 ಲಕ್ಷಕ್ಕೂ ಹೆಚ್ಚು ಬೆಸ್ತ, ಕೋಲಿ, ಕಬ್ಬಲಿಗರ ಜನಸಂಖ್ಯೆ ಇದ್ದು ಇವರೆಲ್ಲರೂ ಬಡತನ ರೇಖೆಯಲ್ಲಿರುವವರು ಇದರಲ್ಲಿ ಶೇಕಡ 90 ರಷ್ಟು ಜನರು ಕಲ್ಯಾಣ ಕರ್ನಾಟಕದವರಾಗಿದ್ದು ಈ ಭಾಗದಲ್ಲಿ ಈ ಸಮುದಾಯದವರನ್ನು ಮೇಲ್ಮನೆ ಸದಸ್ಯರನ್ನಾಗಿ ಸಹ ಮಾಡಿ ಈ ಸಮಾಜವನ್ನು ಗುರುತಿಸಿದೆ. ಗುಲಬರ್ಗದಲ್ಲಿ ಈ ಸಮುದಾಯಕ್ಕೆ ಅತ್ಯವಶ್ಯವಾಗಿ ಬೇಕಾಗಿರುವ ವಿದ್ಯಾರ್ಥಿ ನಿಲಯ, ಶಾಲಾ ಕಾಲೇಜು ಸ್ಥಾಪನೆಯ ಅವಶ್ಯಕತೆಯಿದ್ದು ಈ ಉದ್ದೇಶಕ್ಕೆ ಗುಲಬರ್ಗದಲ್ಲಿ 10 ಎಕರೆ ಜಮೀನು ಮಂಜೂರು ಮಾಡುವ ಬಗ್ಗೆ 72ರಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಮಾನ್ಯ ಕಂದಾಯ ಸಚಿವರ ಹೇಳಿಕೆ:-

ಕಲ್ಯಾಣ ಕರ್ನಾಟಕದಲ್ಲಿರುವ ಬೆಸ್ತ, ಕೋಲಿ, ಕಬ್ಬಲಿಗರ ಸಮುದಾಯಕ್ಕೆ ವಿದ್ಯಾರ್ಥಿ ನಿಲಯ, ಶಾಲಾ ಕಾಲೇಜು ಸ್ಥಾಪನೆಯ ಅವಶ್ಯಕತೆಯ ಸಂಬಂಧ ಗುಲಬರ್ಗದಲ್ಲಿ 10 ಎಕರೆ ಜಮೀನು ಮಂಜೂರಿಸುವ ಕುರಿತು ಸಂಬಂಧಪಟ್ಟ ಇಲಾಖೆಗಳಿಂದ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಪ್ರಸ್ತಾವನೆ ಸ್ವೀಕೃತವಾದಲ್ಲಿ ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**ಸಂಖ್ಯೆ: ಆರ್‌ಡಿ 28 ಎಲ್‌ಜಿಜಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು